# ಮುರುಘಾಮಠದಲ್ಲಿಂದು ೩೦೦ ಕುಟುಂಬಗಳಿಗೆ ದವಸ-ಧಾನ್ಯ ವಿತರಣೆ

**ಚಿತ್ರದುರ್ಗ - ಏ. 29** - ಬಡವರ ಪರವಾದ ದನಿ ಮುರುಘಾ ಶರಣರು. ಯಾರಾದರು ಕಷ್ಟ ಎಂದರೆ ಮೊದಲು ಸ್ಪಂದಿಸುವುದು ಮುರುಘಾಮಠ ಎಂದು ಅಪರ ಜಿಲ್ಲಾಧಿಕಾರಿ ಎ.ಸಂಗಪ್ಪ ಹೇಳಿದರು.

ಶ್ರೀ ಮುರುಘರಾಜೇಂದ್ರ ಮಠದಲ್ಲಿ ಮಹಿಳಾ ಸೇವಾ ಸಮಾಜ, ದೇವಸ್ಥಾನಗಳ ಅರ್ಚಕರು, ಬಿಎಸ್‌ಎನ್‌ಎಲ್‌ನಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರು, ಪಡಿತರ ಚೀಟಿ ಇಲ್ಲದ ನಿವಾಸಿಗಳು, ವಿಜಯನಗರದ ಕೂಲಿ ಕಾರ್ಮಿಕರು ಇನ್ನಿತರೆ ಸಮುದಾಯದ 300 ಕುಟುಂಬಗಳಿಗೆ ದವಸ-ಧಾನ್ಯ ವಿತರಿಸಿ ಮಾತನಾಡಿದ ಅವರು, ಮುರುಘಾಮಠದ ಸೇವೆ ಇಂದು ನಿನ್ನೆಯದಲ್ಲ, ಹಲವು ಶತಮಾನಗಳಿಂದ ಸಾಗಿಬಂದ ಪರಂಪರೆ ಇದು. ಪೂರ್ವದಿಂದ ಪಶ್ಚಿಮದ ಕಡೆ ಹೋಗುವ ಅನೇಕ ಪ್ರಯಾಣಿಕರು, ಪ್ರವಾಸಿಗರು, ಹಸಿವಾದಾಗ ನೆನಪಿಸಿಕೊಳ್ಳುವುದು ಮಧ್ಯಕರ್ನಾಟಕದ ಹೃದಯಭಾಗದಲ್ಲಿರುವ ಚಿತ್ರದುರ್ಗದ ಶ್ರೀಮುರುಘಾಮಠವನ್ನು ಎಂದು ಹೇಳಿದರು.

ಡಾ. ಶಿವಮೂರ್ತಿ ಮುರುಘಾ ಶರಣರು ಮಾತನಾಡಿ, ಬಸವಾದಿ ಶರಣರ ತತ್ತ್ವಗಳನ್ನು ಆಚರಿಸುವುದೆಂದರೆ ಹಸಿದವರಿಗೆ ಮೊದಲು ಅನ್ನ ಕೊಡುವುದು. ಅದು ಬಸವ ಪ್ರಜ್ಞೆ. ಅವರನ್ನು ಕಾಯಕಕ್ಕೆ ತೊಡಗುವಂತೆ ಮಾಡಿ ಬದುಕಿನ ನಿರ್ವಹಣೆಯ ಜವಾಬ್ದಾರಿಯನ್ನು ಕಲಿಸುವುದು. ದುಡಿದು ತಿನ್ನುವ ಪ್ರವೃತ್ತಿಗೆ ಒಳಗೊಳ್ಳವಂತೆ ಮಾಡುವುದು. ಶ್ರೀಮಠದಿಂದ ಪ್ರತಿವರ್ಷ ಬೇಸಿಗೆಯಲ್ಲಿ ಎಸ್‌ಜೆಎಂ ದಂತ ಮಹಾವಿದ್ಯಾಲಯದ ಹತ್ತಿರ ಮಜ್ಜಿಗೆ ವಿತರಣೆಯನ್ನು ಮಾಡಲಾಗುತ್ತಿತ್ತು. ಈ ವರ್ಷ ಕೊರೊನಾ ಹಿನ್ನೆಲೆಯಲ್ಲಿ ದವಸ-ಧಾನ್ಯ ವಿತರಿಸಲಾಗುತ್ತಿದೆ. ಮುರುಘಾಮಠವು ದಾಸೋಹದ ಪರಿಕಲ್ಪನೆಯನ್ನು ಮೊದಲಿನಿಂದಲೂ ಮಾಡಿಕೊಂಡು ಬರುತ್ತಿದೆ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ||. ಪಾಲಾಕ್ಷ ಮಾತನಾಡಿ, ಚಿತ್ರದುರ್ಗ ಜಿಲ್ಲೆ ಶರಣರು, ಸಂತರು ನೆಲೆಸಿರುವ ಜಿಲ್ಲೆ. ಅವರೆಲ್ಲರ ಆಶೀರ್ವಾದ ಈ ಮಣ್ಣಿಗೆ ಇದೆ. ಕೋವಿಡ್-19ನ ಯಾವ ಪ್ರಕರಣಗಳು ಇಲ್ಲಿ ದಾಖಲಾಗಿಲ್ಲ ಎಂಬುದೇ ಇದಕ್ಕೆ ಸಾಕ್ಷಿ. ಆದರೂ ಸಾರ್ವಜನಿಕರು ವೈರಸ್ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದರು.

ಕಾಂಗ್ರೆಸ್ ಪಕ್ಷದ ಮುಖಂಡ ಹನುಮಲಿ ಷಣ್ಮುಖಪ್ಪ ಮಾತನಾಡಿ, ಕೋವಿಡ್-19 ನಿಂದ ಇಡೀ ವಿಶ್ವವೇ ಸಂಕಷ್ಟವನ್ನು ಎದುರಿಸುತ್ತಿದೆ. ಬೇರೆ ರಾಷ್ಟ್ರಗಳಿಗೆ ಒದಗಿರುವ ಆಪತ್ತಿಗಿಂತ ಭಾರತದ್ದು ಕಡಿಮೆ. ಈ ನೆಲೆಯಲ್ಲಿ ಸಂಕಷ್ಟಕ್ಕೊಳಗಾಗಿರುವ ಅನೇಕ ಸಮುದಾಯದವರಿಗೆ ಮುರುಘಾಶರಣರು ದವಸ-ಧಾನ್ಯ ವಿತರಿಸುತ್ತಿರುವುದನ್ನು ನೋಡಿದರೆ ಜನರ ಹಸಿವಿನ ಆಹಾಕಾರದ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ. ಕೋವಿಡ್-19 ಬಂದ ಮೇಲೆ ನಿರಾಶ್ರಿತರಿಗೆ ದವಸ-ಧಾನ್ಯಗಳನ್ನು ವಿತರಿಸಿದ ಮೊದಲ ಮಠ ಮುರುಘಾಮಠ ಎಂದರು.

ಜಂಗಮ ಸಮಾಜದ ಮಲ್ಲಿಕಾರ್ಜುನಯ್ಯ, ಶರಣ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಕೆ.ಎಂ.ವೀರೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತಾಜ್‌ಪೀರ್, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ವಕೀಲರಾದ ಉಮೇಶ್, ಆರ್.ಶೇಷಣ್ಣಕುಮಾರ್, ಮಹಡಿ ಶಿವಮೂರ್ತಿ, ಪೈಲ್ವಾನ್ ತಿಪ್ಪೇಸ್ವಾಮಿ ಮೊದಲಾದವರಿದ್ದರು.







